

ಕುಸ್ತಿ ಪಟು ಬಜರಂಗ್ ಪೂನಿಯಾ

ಎದುರಿಸುತ್ತಿರುವುದು ಇದೇ ಮೊದಲು.

### ಶೂಟಿಂಗ್ ಭರವಸೆ: ಸೌರಭ್-ಬಾಕರ್

ಸೌರಭ್ ಚೌಧರಿ ತಮ್ಮದೇ ವಯಸ್ಸಿನ ಹರಿಯಾಣದ ಮನು ಬಾಕರ್ ಜೊತೆ ಮಿಶ್ರ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಈ ಜೋಡಿ 2019ರ ವಿಶ್ವಕಪ್ ಮತ್ತು ಇದೇ ವರ್ಷ ನವದೆಹಲಿಯಲ್ಲಿ ನಡೆದ ವಿಶ್ವಕಪ್‌ನ ಮಿಶ್ರ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿತ್ತು. ಮನು ತಮ್ಮ 14ನೇ ವಯಸ್ಸಿನ ತನಕ ಬಾಕ್ಸಿಂಗ್, ಟೆನಿಸ್ ಮತ್ತು ಸ್ಕೇಟಿಂಗ್‌ನಲ್ಲಿ ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಪದಕಗಳನ್ನು ಗೆದ್ದಿದ್ದರು.

ಬಳಿಕ ಶೂಟಿಂಗ್‌ನತ್ತ ಹೊರಳಿದ ಮನು ಈ ಕ್ರೀಡೆಯನ್ನು ವೃತ್ತಿಯಾಗಿ ಸ್ವೀಕರಿಸಿದ ವರ್ಷದಲ್ಲೇ ಪದಕಗಳ ಮಳೆ ಸುರಿಸಿದರು. 2018ರ ಕಾಮನ್‌ವೆಲ್ತ್ ಕ್ರೀಡಾಕೂಟದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ 400ಕ್ಕೆ 388 ಅಂಕಗಳನ್ನು ಗಳಿಸಿದ್ದು ಅವರ ನಿಖರ ಗುರಿಗೆ ಸಾಕ್ಷಿಯಾಗಿದೆ. ಆ ಟೂರ್ನಿಯಲ್ಲಿ ಚಿನ್ನದ ಪದಕವನ್ನೂ ಗೆದ್ದರು. ಮಿಶ್ರ ವಿಭಾಗದಲ್ಲಿ ಈ ಜೋಡಿ ಉತ್ತಮ ಹೊಂದಾಣಿಕೆ ಮತ್ತು ಸ್ಥಿರ ಪ್ರದರ್ಶನ ನೀಡುತ್ತಿದೆ. ಆದರೆ ಜಾಗತಿಕ ಕ್ರೀಡಾವೇದಿಕೆಯಲ್ಲಿ ಒತ್ತಡ ನಿರ್ವಹಣೆ ಇಬ್ಬರಿಗೂ ಹೊಸತು.

### ಭಲೇ ಜೋಡಿ: ದಿವ್ಯಾಂಶ್ - ಇಳವೆನ್ನಿಲ

10 ಮೀಟರ್ ಏರ್ ರೈಫಲ್ ತಂಡದ ಮಿಶ್ರ ವಿಭಾಗದಲ್ಲಿ ದಿವ್ಯಾಂಶ್ ಸಿಂಗ್ ಪನ್ವರ್ ಮತ್ತು ಇಳವೆನ್ನಿಲ ವಾಳರಿವನ್ ಸ್ಪರ್ಧಿಸಲಿದ್ದಾರೆ. ಈ ಜೋಡಿ ಹೋದ ತಿಂಗಳು ನವದೆಹಲಿಯಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಇದೇ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿತ್ತು.

ರಾಜಸ್ಥಾನದ ದಿವ್ಯಾಂಶ್ 2019ರಲ್ಲಿ ಬೀಜಿಂಗ್‌ನಲ್ಲಿ ನಡೆದ 'ಐಎಸ್‌ಎಸ್‌ಎಫ್ ವಿಶ್ವಕಪ್'ನಲ್ಲಿ ಬೆಳ್ಳಿ ಪದಕ ಜಯಿಸಿ ಟೋಕಿಯೊ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿದ್ದರು. ತಮಿಳುನಾಡಿನ ಇಳವೆನ್ನಿಲ 2018ರ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದಿದ್ದರು. 2018 ಹಾಗೂ 2019ರ ಜೂನಿಯರ್ ವಿಶ್ವಕಪ್‌ನಲ್ಲಿ ಚಿನ್ನಕ್ಕೆ ಗುರಿ ಇಟ್ಟಿದ್ದರು. ಅಂತರರಾಷ್ಟ್ರೀಯ ರ್‍ಯಾಂಕಿಂಗ್ ಪಟ್ಟಿಯಲ್ಲಿ ಇಳವೆನ್ನಿಲ ಅಗ್ರಸ್ಥಾನದಲ್ಲಿರುವುದು ಒಲಿಂಪಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಭರವಸೆ ಮೂಡಿಸಿದೆ.

### ಕುಸ್ತಿ ಕಣದ ಭರವಸೆ ಬಜರಂಗ್

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಮೂರು ಮತ್ತು ಏಷ್ಯನ್ ಕ್ರೀಡಾಕೂಟದಲ್ಲಿ ಎರಡು



ಶೂಟರ್ ಇಳವೆನ್ನಿಲ ವಾಳರಿವನ್




ಶೂಟರ್ ದಿವ್ಯಾಂಶ್ ಸಿಂಗ್ ಪನ್ವರ್

## ವೇಟ್‌ಲಿಫ್ಟಿಂಗ್ ಚತುರೆ ಮೀರಾಬಾಯಿ

2000ರ ಒಲಿಂಪಿಕ್ಸ್‌ಗೆ ಕರ್ಣಂ ಮಲ್ಲೇಶ್ವರಿ ಅರ್ಹತೆ ಪಡೆದ ಬಳಿಕ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತದಿಂದ ಯಾರೂ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರಲಿಲ್ಲ. ಈ ಬಾರಿ ಮಣಿಪುರದ ಮೀರಾಬಾಯಿ ಚಾನು ಅರ್ಹತೆ ಪಡೆದುಕೊಂಡಿದ್ದಾರೆ. ಮಾಜಿ ವಿಶ್ವ ಚಾಂಪಿಯನ್ ಆದ ಮೀರಾಬಾಯಿ ಮಹಿಳೆಯರ 49 ಕೆ.ಜಿ. ವಿಭಾಗದಲ್ಲಿ ನಾಲ್ಕನೇ ರ್‍ಯಾಂಕ್ ಹೊಂದಿದ್ದಾರೆ. 2017ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, 2020ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು. ಒಲಿಂಪಿಕ್ಸ್‌ಗೂ ಮುನ್ನ ವಿಶ್ವ ರ್‍ಯಾಂಕ್‌ನಲ್ಲಿ ಅಗ್ರಸ್ಥಾನದಲ್ಲಿರುವ ಉತ್ತರ ಕೊರಿಯಾದ ವೇಟ್‌ಲಿಫ್ಟರ್ ಎದುರು ಗೆಲುವು ಪಡೆದಿದ್ದು ಮೀರಾಬಾಯಿ ಅವರ ಪದಕದ ವಿಶ್ವಾಸ ಹೆಚ್ಚಿಸಿದೆ.

ಕೋವಿಡ್ ಕಾರಣದಿಂದ ಹೋದ ವರ್ಷ ಎಲ್ಲಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅವರಿಗೆ ಅವಕಾಶ ಸಿಕ್ಕಿಲ್ಲ. ಆದರೆ, ಸ್ಪರ್ಧಿಸಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ 192 ಕೆ.ಜಿ. ಭಾರ ಎತ್ತು ವ ಮೂಲಕ ಭಾರತದ ಮಟ್ಟಿಗೆ ದಾಖಲೆ ಬರೆದಿದ್ದರು. 'ಕತಾರ್ ಕಪ್' ಟೂರ್ನಿಯಲ್ಲಿ 194 ಕೆ.ಜಿ. ಮತ್ತು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 201 ಕೆ.ಜಿ. ಭಾರ ಎತ್ತಿ ತಮ್ಮ ಸಾಮರ್ಥ್ಯ ವೃದ್ಧಿಸಿಕೊಂಡಿದ್ದರು. 2016ರ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಅನುಭವ ಹೊಂದಿರುವ ಮೀರಾಬಾಯಿ ಅವರಿಗೆ ಪದಕ ಗೆಲ್ಲುವ ಅವಕಾಶ, ವಿಶ್ವಾಸ ಎರಡೂ ಇದೆ.




ವೇಟ್‌ಲಿಫ್ಟರ್ ಮೀರಾಬಾಯಿ ಚಾನು